ಮಾಡಬಹುದು ಎಂದು ಆಲೋಚನೆ ಮಾಡುತ್ತಿದ್ದೇನೆ. ನೀವು ಇನ್ನೊಂದು ಗಂಟೆ ನಿಮ್ಮ ಪರಿಶೀಲನೆ ಮುಂದುವರೆಸಿ. ನಾನು ಏನಾದರೂ ಉಪಾಯ ಹುಡುಕುತ್ತೇನೆ. ನೀವು ನನ್ನೊಂದಿಗೆ ಸಹಕರಿಸಿ. ಚುನಾವಣೆಯಲ್ಲಿ ನಮ್ಮ ಪಕ್ಷವೇ ಗೆದ್ದು ಅಧಿಕಾರಕ್ಕೆ ಬರುವುದು. ಪಕ್ಷ ನನ್ನ ಕೈಬಿಡುವುದಿಲ್ಲ. ನನಗೆ ಟಿಕೇಟ್ ಸಿಕ್ಕರೆ ಸಾಕು ಕಾರ್ಯಕರ್ತರು ನನ್ನನ್ನು ಆರಿಸಿ ತರುತ್ತಾರೆ. ನಾನು ನಿಮ್ಮ ಹಿತಾಸಕ್ತಿ ಕಾಪಾಡುತ್ತೇನೆ' ಎಂದು ಹೇಳಿದ. ಮಂತ್ರಿಗಳ ಮಗನ ಮಾತಿಗೆ ಪೊಲೀಸ್ ಅಧಿಕಾರಿ ತಮ್ಮ ಸಮ್ಮತಿ ಸೂಚಿಸಿದರು.

ಮಂತ್ರಿಗಳ ಮಗ ಒಬ್ಬನೇ ಕುಳಿತು ಆಲೋಚನೆ ಮಾಡಿದ. ಕೊನೆಗೆ ತಂದೆಯ ಹೆಸರಿನಲ್ಲಿ ಒಂದು ಡೆತ್ ನೋಟ್ ಬರೆದು ತಂದೆಯ ಸಹಿ ಮಾಡಿದ. ಬೇರೆಯವರ ಸಹಿಯನ್ನು ಹೇಗೆ ನಕಲು ಮಾಡಬಹುದು ಎಂದು ಮಂತ್ರಿಗಳೇ ತಮ್ಮ ಮಗನಿಗೆ ಕಲಿಸಿದ್ದರು. ಅನೇಕ ಸಲ ಬೇರೆ ಬೇರೆ ಮಂತ್ರಿಗಳ ಸಹಿಗಳನ್ನು ಮಗನಿಂದ ಮಾಡಿಸಿ ತಮಗೆ ಬೇಕಾದ ಕೆಲಸವನ್ನು ಮಂತ್ರಿಗಳು ಮಾಡಿಸಿಕೊಂಡಿದ್ದರು. ತಂದೆಯ ಹೆಸರಿನಲ್ಲಿ ಮಗ ಬರೆದ ಡೆತ್ ನೋಟ್ ಹೀಗಿತ್ತು:

ಪ್ರಿಯ ಮತದಾರ ಬಂಧುಗಳೆ,

'ನಿಮ್ಮ ಸೇವೆಯನ್ನು ಪೂರ್ಣಗೊಳಿಸದೆ ನಾನು ನಿಮ್ಮಿಂದ ಬಹುದೂರ ಸಾಗಿ ಹೋಗುತ್ತಿದ್ದೇನೆ. ನನ್ನ ಸಾವಿಗೆ ಯಾರೂ ಕಾರಣರಲ್ಲ. ಸ್ವತಃ ನಾನೂ ನನ್ನ ಸಾವಿಗೆ ಕಾರಣನಲ್ಲ. ಹಾಗಿದ್ದರೆ ಯಾರು ನನ್ನ ಸಾವಿಗೆ ಕಾರಣ? ನನ್ನ ಎದೆಯ ಮೇಲಿರುವ ಈ ಜೀವನಚರಿತ್ರೆಯೇ ನನ್ನ ಸಾವಿಗೆ ಕಾರಣ. ಇದರ ಲೇಖಕ ಒಬ್ಬ ಪ್ರಸಿದ್ಧ ಪತ್ರಕರ್ತ. ಅವನೇ ನನ್ನ ಸಾವಿಗೆ ಕಾರಣ. ನನ್ನ ಆತ್ಮಚರಿತ್ರೆಯಲ್ಲಿ ನನ್ನ ಬಗೆಗೆ ನಾನು ಹೇಳಿಕೊಂಡಿದ್ದು ಸಂಪೂರ್ಣ ಸುಳ್ಳು ಎಂದು ನನ್ನ ಜೀವನಚರಿತ್ರೆ ಬರೆದ ಪತ್ರಕರ್ತ ಪ್ರತಿಪಾದಿಸಿದ್ದಾನೆ. ಈ ಪುಸ್ತಕ ಓದಿ 'ಮಂತ್ರಿಗಳೆ, ನೀವು ಇಂಥ ಭ್ರಷ್ಟಾಚಾರ ಎಸಗಬಹುದೆ? ನೀವು ಇಂಥ ಅನೈತಿಕ ಕೆಲಸ ಮಾಡಬಹುದೆ? ನೀವು ನಾಡು-ನುಡಿಗೆ ಇಂಥ ದ್ರೋಹ ಮಾಡಬಹುದೆ?' ಎಂದು ನೀವು ನನ್ನನ್ನು ಕೇಳಿದರೆ ನಾನು ಹೇಗೆ ಉತ್ತರ ನೀಡಲಿ? ನಾನು ನನ್ನ ಆತ್ಮಚರಿತ್ರೆಯಲ್ಲಿ ಬಿಂಬಿಸಿಕೊಂಡಷ್ಟು ಮುಗ್ಧನೂ ಅಲ್ಲ, ಈ ಪತ್ರಕರ್ತ ನನ್ನ ಜೀವನಚರಿತ್ರೆಯಲ್ಲಿ ಬಿಂಬಿಸಿದಷ್ಟು ನೀಚನೂ ಅಲ್ಲ. ನಾನು ಮನುಷ್ಯ ಸಹಜ ತಪ್ಪು ಮಾಡಿದ್ದೇನೆ. ಆದರೆ, ನಾನು ಖಳನಾಯಕನಲ್ಲ. 'ಮಂತ್ರಿಗಳು ತಪ್ಪು ಮಾಡಿಲ್ಲ ಎಂದಾದರೆ ಏಕೆ ಆತ್ಮಹತ್ಯೆ ಮಾಡಿಕೊಂಡರು?' ಎಂಬ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಏಳುವುದು ಸಹಜ. ಆದರೆ, ಈ ಜೀವನಚರಿತ್ರೆ ನನ್ನ ಮನಸ್ಸಿಗೆ ಗಂಭೀರ ಗಾಯ ಮಾಡಿದೆ. ಜೀವನದಲ್ಲಿ ನನ್ನ ಉತ್ಸಾಹ ಕುಗ್ಗಿ ಹೋಗಿದೆ, ವರ್ಣಿಸಲಾಗದ ಭಯ ನನ್ನನ್ನು ಆವರಿಸಿದೆ. ಈ ಕಾರಣಕ್ಕಾಗಿ ನಾನು ನನ್ನದೇ ಪಿಸ್ತೂಲಿನಿಂದ ನನ್ನ ಹಣೆಗೆ ಗುಂಡಿಕ್ಕಿಕೊಂಡು ಸತ್ತು ಹೋಗಲಿದ್ದೇನೆ. ನಾನು ಮಾಡಿದ ತಪ್ಪುಗಳಿಗಾಗಿ ನನ್ನನ್ನು ಮನ್ನಿಸಿ. ನನ್ನ ಮಗ ನಿಮ್ಮ ಸೇವೆ ಮುಂದುವರೆಸುತ್ತಾನೆ. ಅವನು ನನಗಿಂತ ಉತ್ತಮ. ಅವನಿಗೆ ನಿಮ್ಮ ಸಂಪೂರ್ಣ ಬೆಂಬಲ ನೀಡಬೇಕು.

ಇತಿ<br>
ನಿಮ್ಮ ಸೇವಕ.

ಮಂತ್ರಿಗಳ ಮಗ ಪೊಲೀಸ್ ಅಧಿಕಾರಿಯನ್ನು ಕರೆದು ಅವನ ಕೈಗೆ ಡೆತ್ ನೋಟ್ ಇಟ್ಟನು. ಪೊಲೀಸ್ ಅಧಿಕಾರಿ ಪೇದೆಗಳನ್ನು ಹೊರಗೆ ಕಳಿಸಿ ಮಂತ್ರಿಗಳ ಕಿಸೆಯಲ್ಲಿ ಡೆತ್ ನೋಟ್ ತುರುಕಿದ. ಮಂತ್ರಿಗಳ ಮಗ ಮಾಧ್ಯಮದವರನ್ನು ಕರೆದು ಪತ್ರಿಕಾಗೋಷ್ಠಿ ನಡೆಸಿ ತಂದೆಯ ಆತ್ಮಹತ್ಯೆಯ ಕುರಿತು ಮಾಹಿತಿ ನೀಡಿದ. ಜೊತೆಗೆ ಆತ್ಮಹತ್ಯೆಗಿರುವ ಕಾರಣಗಳನ್ನು ಒಂದೊಂದಾಗಿ ಬಿಡಿಸಿ ಹೇಳಿದ. ಕೊನೆಗೆ ತಂದೆ ಬರೆದಿಟ್ಟ ಡೆತ್ ನೋಟ್ ಓದಿದ. ಪೊಲೀಸ್ ಅಧಿಕಾರಿ ಮಾತನಾಡಿ ಮಂತ್ರಿಗಳ ಮಗ ಆಡಿದ ಎಲ್ಲಾ ಮಾತುಗಳನ್ನು ಸಮರ್ಥಿಸಿದರು.

ಅಲ್ಲಿಗೆ ಮಂತ್ರಿಗಳ ಆತ್ಮಹತ್ಯೆಯ ಪ್ರಕರಣ ಸುಖಾಂತ್ಯ ಕಂಡಿತು. ಮತದಾರರು ಮಂತ್ರಿಗಳ ಮಗನನ್ನು ಚುನಾವಣೆಯಲ್ಲಿ ಗೆಲ್ಲಿಸುವ ನಿರ್ಧಾರ ಮಾಡಿದರು. ಮಂತ್ರಿಗಳ, ಅಧಿಕಾರಿಗಳ ಹೆಸರಿನಲ್ಲಿ ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ಆತ್ಮಚರಿತ್ರೆ ಬರೆಯಲು ಕೆಲವು ಲೇಖಕರು ಕೈಯಲ್ಲಿ ಪೆನ್ನು ಹಿಡಿದು ಒಪ್ಪಂದಕ್ಕೆ ಸಹಿ ಹಾಕಲು ಕಾದರು. ಇಂಥ ರಾಜಕಾರಣಿಗಳ ಮತ್ತು ಅಧಿಕಾರಿಗಳ ಜೀವನಚರಿತ್ರೆ ಬರೆಯಲು ಮತ್ತೊಬ್ಬ ಯುವ ಲೇಖಕ ಮಾಹಿತಿ ಸಂಗ್ರಹಿಸತೊಡಗಿದ.

●